Ref.No.8/2023

MW-1,

Ref.No.8/2023

MW-1,

Ref.No.8/2023

MW-1,

Ref.No.8/2023

MW-1,

Ref.No.8/2023

MW-1,

**ದಿನಾಂಕಃ 05.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ- 2 ನೇ ಪಾರ್ಟಿ ಪರವಾಗಿಃ ಶ್ರೀ.CKM ವಕೀಲರಿಂದ**

ದಿಃ20.03.2020 ರಂದು ನಾನು ಹಾಸನ - ಗಂಗೂರು ಬಸ್ಸಿನಲ್ಲಿ ನಿರ್ವಾಹಕನಾಗಿ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದೆ ಎಂದರೆ ನಿಜ. ಆ ದಿನ ನಮ್ಮ ಬಸ್ಸಿನಲ್ಲಿ ಹೊಸ ಬಸ್ ನಿಲ್ದಾಣದಿಂದ ಹೊರಟಾಗ 4+00+1 ಪ್ರಯಾಣಿಕರಿದ್ದರು ಎಂದರೆ ನಿಜ. ನಮ್ಮ ಬಸ್ಸು ಅಲ್ಲಿಂದ ಹಳೆ ಬಸ್ ನಿಲ್ದಾಣಕ್ಕೆ ಭೇಟಿ ಕೊಟ್ಟು ಪ್ರಯಾಣವನ್ನು ಮುಂದುವರೆಸುತ್ತದೆ ಎಂದರೆ ನಿಜ. ಹೊಸ ಬಸ್ ನಿಲ್ದಾಣದಿಂದ ಹಳೆ ಬಸ್ ನಿಲ್ದಾಣದವರೆಗೆ ಒಂದು ಸ್ಟೇಜ್ ಇದೆ ಎಂದರೆ ನಿಜ.

ತನಿಖಾ ತಂಡದವರು ನಮ್ಮ ಬಸ್ಸನ್ನು ತಪಾಸಣೆ ಮಾಡಿ ಪರಿಶೀಲಿಸಿದಾಗ ನಾನು 3 ಜನ ಪ್ರಯಾಣಿಕರಿಂದ ತಲಾ ರೂ.6/-ರಂತೆ ಪಡೆದುಕೊಂಡು, ಅವರಿಗೆ ಟಿಕೆಟ್ ನೀಡದೆ, ಕರ್ತವ್ಯ ಲೋಪ ಎಸಗಿದ್ದೇನೆ ಎಂದು ಮೆಮೊ ಕೊಟ್ಟರು ಎಂದರೆ ನಿಜ. ನಾನು 3 ಜನ ಪ್ರಯಾಣಿಕರಿಗೆ ಟಿಕೆಟ್ ನೀಡದೆ ಅವರಿಂದ ಹಣ ಪಡೆದುಕೊಂಡು ಗಂಭೀರ ಕರ್ತವ್ಯ ಲೋಪ ಎಸಗಿದ್ದೇನೆ ಎಂದರೆ, ಸಾಕ್ಷಿಯು ಸದರಿ ಪ್ರಯಾಣಿಕರು ನಾವು ಬೇರೆ ಬಸ್ಸಿನಲ್ಲಿ ಹಲಸಿನ ಹಳ್ಳಿಯ ಕಡೆಗೆ ಹೋಗಬೇಕಿದೆ, ಆದ್ದರಿಂದ ಇಳಿಯುತ್ತೇವೆ ಎಂದು ಹೇಳಿದರು, ಈ ವಿಚಾರವನ್ನು ತನಿಖಾಧಿಕಾರಿಯವರಿಗೆ ತಿಳಿಸಿದರು ಕೂಡ ಅವರು ಕೇಳಿಸಿಕೊಳ್ಳಲಿಲ್ಲ ಎನ್ನುತ್ತಾರೆ.

ಆ ದಿನ ನನಗೆ ನೀಡಿದ ಮೆಮೊ ಗೆ ನಾನು ಸಹಿ ಹಾಕಿ ಪಡೆದುಕೊಂಡಿದ್ದೇನೆ ಎಂದರೆ ನಿಜ. ದಿಃ11.06.2020 ರಂದು ನನಗೆ ದೋ.ಪಟ್ಟಿಯನ್ನು ನೀಡಿದ್ದಾರೆ ಎಂದರೆ ನಿಜ. ಈ 3 ತಿಂಗಳ ಅವಧಿಯಲ್ಲಿ ನಾನು ಈ ಮೇಲೆ ಹೇಳಿದ ವಿಚಾರದ ಬಗ್ಗೆ ಮೇಲಾಧಿಕಾರಿಗಳಿಗೆ ಅರ್ಜಿಯನ್ನು ಕೊಟ್ಟಿದ್ದೇನೆ, ಆ ಅರ್ಜಿಯ ಪ್ರತಿಯನ್ನು ವಕೀಲರಿಗೆ ಕೊಟ್ಟಿದ್ದೇನೆ. ನಾನು ಯಾವುದೇ ಅರ್ಜಿಯನ್ನು ಕೊಟ್ಟಿರಲಿಲ್ಲ. ನನ್ನ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಎಂ-19 ರಲ್ಲಿ ಕಾಣಿಸಿರುವ ಭೂತೇಶ ಕೆ.ಡಿ. ಎಲ್ಲಿಂದ ಎಲ್ಲಿಗೆ ಪ್ರಯಾಣಿಸುತಿ್ತದ್ದರು ಎಂದು

Ref.No.8/2023

MW-1,

ನಮೂದಿಸಿಲ್ಲ ಎಂದರೆ ನಿಜ. ಸದರಿ ದಾಖಲೆಯನ್ನು ಈ ಕೇಸಿಗೋಸ್ಕರ ನಾನೇ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಯು ಬಸ್ ಪಾಸ್ ಆಗಿರುವುದಿಲ್ಲ, ಗುರುತಿನ ಚೀಟಿಯಾಗಿರುತ್ತದೆ ಎಂದರೆ ನಿಜ.

ತನಿಖಾಧಿಕಾರಿಯವರು ಆ ಸಮಯದಲ್ಲಿ ಬಾಡಿಕ್ಯಾಮೆರಾವನ್ನು ಪರೀಕ್ಷಾರ್ಥವಾಗಿ ಧರಿಸಿಕೊಂಡಿದ್ದರು, ಮತ್ತು ಖಾಯಂ ಆಗಿ ಅವರಿಗೆ ಕೊಟ್ಟಿರಲಿಲ್ಲ ಎಂದು ನಿಡ್ಲೂ-1ರಲ್ಲಿ ನಮೂದಿಸಿದ್ದಾರೆ ಎಂದರೆ ನಿಜ. ಈ ಕೇಸಿಗೆ ಅನುಕೂಲವಾಗಲೀ ನಾನು ಆ ದಾಖಲೆಯನ್ನು ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಗಂಭೀರ ಸ್ವರೂಪದ ತಪ್ಪು ಎಸಗಿರುವುದರಿಂದ, ನನಗೆ ನೀಡಿದ ಶಿಕ್ಷೆಯು ಸರಿಯಾಗಿದೆ ಎಂದರೆ ಸರಿಯಲ್ಲ. ನನ್ನ ಕ್ಲೇಂ ಅರ್ಜಿಯಲ್ಲಿ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಕಟ್ಟು ಕಥೆಯನ್ನು ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಕೃತ್ಯದಿಂದ ನಮ್ಮ ಸಂಸ್ಥೆಗೆ ಆರ್ಥಿಕವಾಗಿ ನಷ್ಟವನ್ನು ಉಂಟುಮಾಡಿದ್ದೇನೆ ಎಂದರೆ ಸುಳ್ಳು. ನಾನು ಕ್ಲೇಂ ಅರ್ಜಿಯಲ್ಲಿ ಕೇಳಿರುವ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡಾಲ್ಪ್ ಪೆರೇರಾ),
ಅಧ್ಯಕ್ಷಾಧಿಕಾರಿಗಳು,
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.